


ನೋವು ನರಳಿಕೆಗಳ ತಾಣಗಳಾದ ಯಾಜಿದಿಗಳ ಶಿಬಿರಗಳು

ಫಾತಿಮಾ ಈಗ ವಿಧವೆ. ಮೂರು ಮಕ್ಕಳನ್ನು ತನ್ನ ಮಡಿಲಲ್ಲಿ ಹಾಕಿಕೊಂಡಿದ್ದಾಳೆ. 'ಹೇಗಾದರೂ ಸರಿ ನಿಮ್ಮ ಜೊತೆ ನನ್ನನ್ನು ಮುಂಬೈಗೆ ಕರೆದುಕೊಂಡು ಹೋಗಿ' ಎಂದು ಚಿಕ್ಕ ಮಗುವಿನಂತೆ ಆಕೆ ಅಳುವಾಗ ನಾವು ನಿರುತ್ತರರಾಗಿದ್ದೆವು. ಇದು ಒಬ್ಬ ಫಾತಿಮಾಳ ಕಥೆಯಲ್ಲ. ಮತ್ತೊಬ್ಬ ಭಾರತೀಯ ಮಹಿಳೆಯೂ ಅವಳ ಸಂಪರ್ಕದಲ್ಲಿ ಇದ್ದಳಂತೆ. 'ಈಗ ಆಕೆ ಎಲ್ಲಿದ್ದಾಳೋ ನಾಕಾಣೆ' ಎಂದಳು. ಜಗತ್ತಿನ ನಲವತ್ತಕ್ಕೂ ಹೆಚ್ಚು ದೇಶಗಳ ಜನ ಅಲ್ಲಿ ಸೆರೆಯಾಗಿದ್ದಾರೆ.

ಅಲ್ಲಿದ್ದವರೆಲ್ಲ ಅಂತರ್ಜಾಲದಲ್ಲಿ ಐಸಿಸ್ ಉಗ್ರರು ಹೆಣೆದ ಜಾಲದ ಬಲೆಯಲ್ಲಿ ಸಿಲುಕಿದವರು. ಇಸ್ಲಾಮಿಕ್ ಸ್ಟೇಟ್ ಸಿದ್ಧಾಂತ ಮೆಚ್ಚಿ ಬಂದವರೂ ಇದ್ದಾರೆ. ಅವರಲ್ಲಿ ಕೆಲವರಿಗೆ ಅಲ್ಲಿಗೆ ಬರಲು ಇಷ್ಟ ಇರದಿರಬಹುದು, ಆದರೆ ಅವರು ಗಂಡಂದಿರ ಜೊತೆಗೂಡಿ ಅಲ್ಲಿಗೆ ಬಂದಿದ್ದಾರೆ. ಫಾತಿಮಾಗೆ ತನ್ನ ತವರಿಗೆ ಹಿಂದಿರುಗುವ ಆಸೆಯಿದೆ. ಬಹುತೇಕರಿಗೆ ಆ ಬಯಕೆ ಇಲ್ಲದೆ ಇರಬಹುದು. ಆ ಶಿಬಿರದಲ್ಲಿ ರಷ್ಯಾದವರು ಹೆಚ್ಚು ಜನರಿದ್ದಾರೆ. ನಾವು ಪಾಕಿಸ್ತಾನಿಯೊಬ್ಬನನ್ನು ಮಾತನಾಡಿಸಿದೆವು.

ಈಗಲೂ ಬಹುತೇಕರಲ್ಲಿ 'ಐಸಿಸ್ ಚಿರಾಯು!' ಎನ್ನುವ ಕನಸೇ ಇದೆ. ತಮ್ಮ ಮಕ್ಕಳಿಗೆ ಶಿಕ್ಷಣವಿಲ್ಲ. ಒಳ್ಳೆಯ ಭವಿಷ್ಯ ಇಲ್ಲ ಎಂಬ ವಾಸ್ತವದಲ್ಲೂ ಕೆಲ ತಾಯಂದಿರು ಮಕ್ಕಳಿಗೆ ಐಸಿಸ್ ಹಿರಿಮೆಯನ್ನು ಹೇಳುತ್ತಾರೆ. ಆ ಶಿಬಿರದಲ್ಲಿ ತೋರುಬೆರಳು ತೋರಿಸುವುದನ್ನು ನೋಡಿದ್ದೇನೆ. ಸಾಮಾನ್ಯವಾಗಿ ಅದನ್ನು ನಾವು ಎಚ್ಚರಿಕೆ ಎಂದು ಭಾವಿಸುತ್ತೇವೆ. ಆದರೆ, ಅವರು 'ಐಸಿಸ್ ಚಿರಾಯು' ಎನ್ನುವ ಅರ್ಥದಲ್ಲಿ ಆ ಚಿಹ್ನೆಯನ್ನು ತೋರಿಸುತ್ತಾರೆ ಎಂದು ನಂತರ ಗೊತ್ತಾಯಿತು.

## ಕೊನೆಯವರೆಗೂ ಆತಂಕ

ಸಿರಿಯಾಗೆ ಹೋಗಿ ಬರುವುದು ಸುಲಭವಲ್ಲ. ಸುಮಾರು 25 ಅನುಮತಿಗಳನ್ನು ಪಡೆಯಬೇಕು. 'ವೀಸಾ ಅರೈವಲ್ ಇದೆ, ಬನ್ನಿ' ಎಂದು ಹೇಳುತ್ತಾರೆ. ಆದರೆ ಭಾರತೀಯರಿಗೆ ವೀಸಾ ಅರೈವಲ್ ಇಲ್ಲ. ಅಲ್ಲಿಗೆ ಹೋಗಬೇಕು ಎಂದರೆ ಇರಾಕಿ ಖುರ್ದಿಷಿಯೊಬ್ಬರ ಪ್ರಾಯೋಜಕತ್ವ ಬೇಕೇಬೇಕು. ಹಾಗಿದ್ದರೆ ಮಾತ್ರ ಹಳೆಯ ಐಸಿಸ್ ಸಾಮ್ರಾಜ್ಯದ ಒಳಹೋಗಲು ಸಾಧ್ಯ. ನಾವು ಅಲ್ಲಿಗೆ ಹೋಗಿ ಬಂದಿದ್ದೇವೆ ಎನ್ನುವುದನ್ನು ಗುರುತಿಸುವ ಯಾವ ಕುರುಹೂ ಉಳಿದಿಲ್ಲ. ನಮ್ಮ ಪಾಸ್‌ಪೋರ್ಟ್ ಮೇಲೆ ಒಂದು ಮುದ್ರೆಯನ್ನೂ ಹಾಕಿಲ್ಲ. ನಮ್ಮ ಪ್ರೆಸ್ ಗುರುತಿನ ಚೀಟಿಯೇ ಅಲ್ಲೂ ಗುರುತಿನ ಪತ್ರವಾಯಿತು. ಒಂದು ರೀತಿಯಲ್ಲಿ ಅಧಿಕೃತ ನುಸುಳುಕೋರರಂತೆ ಹೋಗಿಬಂದಿದ್ದೇವೆ. ನಾವು ಹೋದ ದಿನ ಶುಕ್ರವಾರ. ಅಂದಲ್ಲಿ ಸಾರ್ವತ್ರಿಕ ರಜೆ. ನಮ್ಮ ಆಹ್ವಾನದ ಪ್ರಾಯೋಜಕತ್ವ ವಹಿಸಿದವರು ರಜೆಯ ಕಾರಣಕ್ಕೆ ಇನ್ನೆಲ್ಲೋ ಹೋಗಿದ್ದರು. ನಾವು ವಿಮಾನ ನಿಲ್ದಾಣದಲ್ಲಿ ಅವರಿಗಾಗಿ ಐದು ಗಂಟೆ ಕಾಯುತ್ತಾ ಕುಳಿತಿದ್ದೆವು.

ಅಲ್ಲಿ ಏನಾದರೂ ಘಟಿಸಬಹುದು ಎನ್ನುವ ಆತಂಕ ಮರಳಿ ಬರುವ ತನಕ ಇದ್ದೇ ಇತ್ತು. ನಮ್ಮ ಟ್ಯಾಕ್ಸಿ ಚಾಲಕ ಇರಬಹುದು, ಇಲ್ಲವೇ ನಮಗೆ ಸಿಕ್ಕ ಭಾಷಾಂತರ ಸಹಾಯಕ ಇರಬಹುದು, ಅವರೇ ಏನಾದರೂ ತೊಂದರೆ ಉಂಟುಮಾಡುವ ಸಾಧ್ಯತೆಗಳಿದ್ದವು. ಯಾವ ಹೊತ್ತಿನಲ್ಲಾದರೂ ಬಾಂಬ್ ಬೀಳಬಹುದಿತ್ತು, ಗುಂಡಿನ ದಾಳಿ ಆಗಬಹುದಿತ್ತು. ಆದರೆ ನಮಗೆ ಸಿಕ್ಕವರು ತುಂಬ ಸಹಾಯ ಮಾಡಿದರು. ಅವರ ಬಳಿ ನಮ್ಮ ರಕ್ಷಣೆಗಾಗಿ ಅಸ್ತ್ರಗಳೂ ಇದ್ದವು. ನಮ್ಮನ್ನು ಸುರಕ್ಷಿತ ಮಾರ್ಗದಲ್ಲಿ ಕರೆದುಕೊಂಡು ಹೋಗಿ ಬೀಳ್ಕೊಟ್ಟರು. ಆಹಾರದ ವಿಷಯದಲ್ಲಿ ಸಾಕಷ್ಟು ಸಮಸ್ಯೆ ಎದುರಿಸಿದೆವು. ನಮ್ಮ ಆಹಾರಪದ್ಧತಿ ಅಲ್ಲಿಲ್ಲ. ನಾನು ಮಾಂಸಾಹಾರವನ್ನೂ ಸೇವಿಸುವುದರಿಂದ ಸ್ವಲ್ಪ ಹೊಂದಾಣಿಕೆ ಮಾಡಿಕೊಂಡೆ. ನನ್ನ ಜೊತೆ ಬಂದಿದ್ದ 'ವೀಕ್'ನ ಚೆನ್ನೈ ವಿಶೇಷ ಪ್ರತಿನಿಧಿ ಲಕ್ಷ್ಮೀ ಸುಬ್ರಹ್ಮಣ್ಯ ಶುದ್ಧ ಸಸ್ಯಾಹಾರಿ. ಅವರು ಮಾಮೂನಿಯ ಎಂಬ ಅಲ್ಲಿನ ಸಿಹಿ ಪದಾರ್ಥವನ್ನೇ ನಿತ್ಯವೂ ಸೇವಿಸಿದರು. ಕೇಸರಿಬಾತನ್ನು ಹೆಚ್ಚು ನೀರು ಹಾಕಿ ಮಾಡಿದರೆ ಹೇಗೆ ಕಾಣುತ್ತೋ ಹಾಗೆ ಮಾಮೂನಿಯ ಕಾಣಿಸುತ್ತದೆ.

## ಸವಾಲುಗಳ ಹಾದಿಯಲ್ಲಿ...

ರಾಮ್ ಪಾಟೀಲ್ ಅವರ ಜೊತೆ ಇರಾಕ್ ಯುದ್ಧಭೂಮಿಗೆ ಈ ಹಿಂದೆ ಹೋಗಿದ್ದಿದೆ. ಥಾಯ್ಲೆಂಡ್‌ನಲ್ಲಿ ಫುಟ್‌ಬಾಲ್ ಆಟಗಾರರು ಅಪಾಯದಲ್ಲಿ ಸಿಲುಕಿದ ಘಟನೆಯನ್ನು ದಾಖಲಿಸಿದ ನೆನಪು. ಶ್ರೀಲಂಕಾದಲ್ಲಿ ಐಸಿಸ್ ಉಗ್ರರು ನಡೆಸಿದ ಬಾಂಬ್ ಸ್ಫೋಟದ ಫೋಟೊ ವರದಿ ಮಾಡಿದ್ದೆ. ಇದೆಲ್ಲ ಏಕೆ ಎಂದರೆ, ಜಗತ್ತಿನ ಬೇರೆ ಫೋಟೊ ಜರ್ನಲಿಸ್ಟ್ ಅಂತೆಯೇ ನಾವೂ ಏನೆಲ್ಲವನ್ನೂ ಮಾಡಬಲ್ಲೆವು ಎಂದು ತೋರಿಸಲು. ಯೂರೋಪ್ ಮತ್ತು ಅಮೆರಿಕದ ಕೆಲವು ಪತ್ರಕರ್ತರು ತಮ್ಮ ಜೀವನವನ್ನೇ ಒತ್ತೆ ಇಟ್ಟು ಕೆಲಸ ಮಾಡುತ್ತಾರೆ. ಅಂತಹ ಫೋಟೊ ಜರ್ನಲಿಸಂ ಕೊಡುವ ಥ್ರಿಲ್ ಬೇರೇಯದೇ ರೀತಿಯದ್ದು. ಎಂತಹ ಕ್ಲಿಷ್ಟಕರ ಸನ್ನಿವೇಶವನ್ನು ವರದಿ ಮಾಡಲು ಹೇಳಿದರೂ ನಾನು ಸಿದ್ಧ. ಪತ್ರಿಕೋದ್ಯಮದ ನಿಜವಾದ ಸವಾಲು ಇರುವ ಸನ್ನಿವೇಶಗಳನ್ನು ತಪ್ಪಿಸಿಕೊಳ್ಳುವುದು ನನ್ನ ವೃತ್ತಿಪರತೆಗೆ ಒಗ್ಗುವಂತಹದ್ದಲ್ಲ.